'ಬಿಸನೀರ ಕಾಸಿನೀ ಲಗೂನ ಜಳಕಾ ಮಾಡಸ್ತಿನಿ ಪಟಕ್ನ ಚಾ ಕುಡದ ಬಾ'

'ನಾ ವಲ್ಲೆವ್ವಾ ಈ ತಂಡ್ಯಾಗ'

'ಬಿಸಿ ಬಿಸಿ ನೀರ ಮೈ ಮ್ಯಾಲ ಬಿದ್ರ ಮೈ ಹಗರ ಅಕೈತಿ' ಬಲವಂತ ಮಾಡಿ ಪದ್ದಕ್ಕ, ಅವರಜ್ಜಿನ ಬಚ್ಚಲಕ್ಕಿಳಿಸಿ ಸಣ್ಣ ಕೂಸಿನ ಗತೆ, ಕೈ-ಮೈ ಉಜ್ಜಿ ಬೆನ್ನು ತಿಕ್ಕಿ ಜಳಕಾ ಮಾಡಿಸುವಾಗ ದುಂಡಜ್ಜಿ ಕಣ್ಣಲ್ಲಿ ಮೊಮ್ಮಗಳು ತೋರುವ ಪ್ರೀತಿಯ ಕಂಡು ಕಣ್ಣು ತುಂಬಿದವು.

ಅವತ್ತು ಗಣೇಶನ ಉತ್ಸವ. ಪದ್ದಕ್ಕ ಆಗಿನ್ನೂ ಎಳೆಗೂಸು. ಅವರಪ್ಪ ಮುದ್ದಪ್ಪ ಕುಡಿದು ಬಂದು ಹೆಂಡತಿಯನ್ನು ಹೊಡಿಯುತ್ತಾ, ಬಡಿಯುತ್ತಾ ಜಗಳಕ್ಕೆ ಬಿದ್ದಿದ್ದ. ಒರಟು ಹೆಂಗಸು ಮಾಯವ್ವ ಅವನ ಕೋಪ ನೆತ್ತಿಗೇರುವಷ್ಟು ಕೆಟ್ಟಪದಗಳಿಂದ ಬೈದುಬೈದು ಗಂಡನನ್ನು ರಾಕ್ಷಸನನ್ನಾಗಿ ಮಾಡಿದಳು. ಕೈಗೆ ಸಿಕ್ಕ ಒಂದು ಹಿಡಿಗಲ್ಲಿನಿಂದ ಮುದ್ದಪ್ಪ ಹೆಂಡತಿಯ ತಲೆಗೆ ಜೋರಾಗಿ ಜಜ್ಜಿಬಿಟ್ಟ. ಮಾಯವ್ವನ ತಲೆಯಿಂದ ಕಾರಂಜಿಯಂತೆ ರಕ್ತ ಪುಟಿಯುವುದು ಕಂಡು ಸುತ್ತಮುತ್ತಲಿನ ಮಂದಿ ಗಾಬಾದರು. ಅರಗಳಿಗೆಯಲ್ಲಿಯೇ ಮಾಯವ್ವ ಜೀವ ಮಾಯವಾಗಿ ಅಕಿ ಹೆಣವಾಗಿ ಮಲಗಿದಳು. ಊರ ದೈವದವರೆಲ್ಲರೂ ಮುದ್ದಪ್ಪನಿಗೆ ಧರ್ಮದೇಟು ಹಾಕುವ ಬದಲು ನಡೆದ ವಿಷಯ ಪೊಲೀಸರಿಗೆ ಮುಟ್ಟಸಿದರು. ಪೊಲೀಸರು ತನ್ನನ್ನು ಸುಮ್ನೆ ಬಿಟ್ಟಾರೇ ಎಂದು ಮುದ್ದಪ್ಪ ಹೆದರಿ ಒಳಮನಿ ಜಂತಿಗೆ ನೇಣು ಹಾಕಿಕೊಂಡು ಸಾವಿಗೆ ಶರಣಾದ. ಎಳೆಗೂಸು ಪದ್ದಕ್ಕ ತೊಟ್ಟಿಲಲ್ಲಿ ಒಂದೇ ಸವನೆ ಚೀರುತ್ತಿತ್ತು.



ದುಂಡಜ್ಜಿಗೆ ಮನಿ ಹೊತ್ತಿ ಉರಿದು ಬೂದಿಯಾದಂತೆ ಆ ಕ್ಷಣ ಅನಿಸಿತು. ಅಳುವ ಕಂದನ ಜೋಪಾನ ಮಾಡುತ್ತಾ, ದನಕರ ಮೇಸುತ್ತಾ, ಕೋಳಿ ಕುರಿ ಸಾಕುತ್ತಾ, ಜೀವನ ದೂಡಿಕೊಂಡು ಬಂದಳು.

ಈಗ ಮೊಮ್ಮಗಳು ಬೆಳೆದು ನಿಂತು ಇಡೀ ಬದುಕಿನ ನೊಗ ಹೊತ್ತು, ಬದುಕಿನ ಬಂಡಿಯನ್ನು ಎಳೆಯುವ ರೀತಿಯನ್ನು ಕಂಡು ದುಂಡಜ್ಜಿ ಸಂತಸದ ಹೊನಲಿನಲ್ಲಿ ತೇಲುತ್ತ ಕಾಲನ ಕರೆಗೆ ಕಾಯುತ್ತಿದ್ದಳು.

* * *

ನಾನು, ಪದ್ದಕ್ಕ ದಿನಾ ಗೌಡ್ರ ಹೊಲದಾಗ ಎಮ್ಮೀ ಮೇಸಾಕ ಹೊಕ್ಕಿದ್ದಿವಿ. ದಮ್ ದುಮ್ಮ್ಯಾನ ಮಳಿ ಆಗಿದ್ದಕ್ಕ ಗೌಡರ ಬೀಳ ಹೊಲದ ತುಂಬಾ ಮದಾಮದಾ ಅನ್ನುವ ಮೇವಿನ ಕಸಾ ಬೆಳಿದು ಊರ ದನಗಳ ಹೊಟ್ಟೆಗೆ ಮೃಷ್ಟಾನ್ನವಾಗಿತ್ತು. ಊರ ಮಂದಿ ಎಮ್ಮಿ, ಆಕಳಾ, ಆಡು, ಕುರಿ, ಗೌಡರ ಹೊಲದ ತುಂಬಾ ಬಣ್ಣದ ರಂಗೋಲಿ ಹಾಕಿದ್ಹಂಗ ಅಲ್ಲಲ್ಲಿ ನಿಂತು ಒಣಗಿದ ಕಡ್ಡದ ಹುಲ್ಲು, ಕಿರಕಸಾನಗಿ, ದಗಡಿಮಂಡು ಬಳ್ಳಿ, ನಡಮುರಕಾ, ಜೇಕಿನ ಕಸಾ, ಚಿಮಕ್ಯಾನ ಹುಲ್ಲಾ, ಮುಳ್ಳಸಜ್ಜಿ ಹುಲ್ಲಾ, ಮೇಯುತ್ತ ಬಾಲ ಅಲ್ಲಾಡಿಸುತ್ತಾ 'ಕರಮ್ ಕುರುಮ್' ಚುರುಮುರಿ ತಿಂದ್ಹಂಗ ತಿಂದು ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳುತ್ತಿದ್ದವು.

ಇಡೀ ಊರ ದನಾ ಗೌಡ್ರ ಬೀಳದಾಗ ಮೇದು ಮೇದು ಮೇವೆಲ್ಲ ತಿಂಗಳೊಪ್ಪತ್ತನ್ಯಾಗ ನೆಲಸಮಾ ಆದಾಗ, ದನಗೋಳು ಉಡಾಳಗಿರಿ ಶುರು ಹಿಡಿಸಿದವು. ಮಗ್ಗಲ ಹೊಲಕ್ಕ ಹೋಗೂದು, ಒಂದಕ್ಕೊಂದು ಟಗ್ ಟಗ್ ಹಾದಾಡೂದು, ನಿಂತ ಜಾಗಾದ ಮ್ಯಾಲ ನಿಲ್ಲದ ಮೋತಿ ನೆಲದಾಗ ಇಟಗೊಂದ ಮನ ಬಂದಕಡೆ ತಿರಗಾಕ ಹತ್ತಿದಾಗ ಪದ್ದಕ್ಕ, 'ನೋಡ ಹನಮ್ಯಾ ನಾಳಿಯಿಂದ ಹಿರೇಗುಡ್ಡದ ಕಡೆಗೆ ಹೋಗೂನು. ಇಲ್ಲಿ ದನಾ ಮೇಯಾಂಗಿಲ್ಲಾ, ಅವುತುರ ಹೊಟ್ಟಿ ತುಂಬಂಗಿಲ್ಲಾ, ಹಿಂಗತಿ ಕಾಡಸಾಕ ಹತ್ತಾವು' ನಾಳೆಯ ದನ